ಸಾಕ್ಷಿಯನ್ನು ದಿನಾಂಕಃ 16-08-2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀಃ ಹೆಚ್.ಎಸ್.ಎಂ , 1ನೇ ಪ್ರತಿವಾದಿ ಪರ ವಕೀಲರಿಂದಃ

ಹೊಸಬೆಟ್ಟು ಗ್ರಾಮದ ಸರ್ವೇ ನಂ. 104/1ಸಿ ರಲ್ಲಿ 1 ಎಕರೆ ನಮಗೆ ಸೇರಿದ ಜಾಗವಾಗಿರುತ್ತದೆ . ಅದೇ ಸರ್ವೇ ನಂಬರಿನಲ್ಲಿ 1 ಎಕರೆ 69 ಸೆಂಟ್ಸ್ ಜಾಗ 1ನೇ ಪ್ರತಿವಾದಿಗೆ ಸೇರಿದ ಜಾಗವಾಗಿರುತ್ತದೆ . ಸರ್ವೇ ನಂ. 104/1ಸಿ ರ ಒಟ್ಟು ವಿಸ್ತೀರ್ಣ 2 ಎಕರೆ 69 ಸೆಂಟ್ಸ್. ಕಲ್ಯಾಣಿ ಶೇಡ್ತಿಯವರು ಸರ್ವೇ ನಂ. 104/1ಸಿ ರಲ್ಲಿ 1 ಎಕರೆಯನ್ನು ಮಾರಾಟ ಮಾಡುವಾಗ ಸರ್ವೇ ನಂ. 104/1ಸಿ1 ರಲ್ಲಿ ಇರುವ ರಸ್ತೆಯ ಹಕ್ಕನ್ನು ಸೇರಿಸಿ ನಿಪಿ-2 ರಡಿಯಲ್ಲಿ ನನಗೆ ಮಾರಾಟ ಮಾಡಿರುತ್ತಾರೆ ಎಂಬುದು ನನ್ನ ಸಾಧನೆಯಾಗಿದೆ . ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ ಸಂದರ್ಭದಲ್ಲಿ ಸದರಿ ಆಸ್ತಿ ಖಾಲಿ ಜಾಗವಾಗಿತ್ತು . ನಾನು ಖರೀದಿ ಮಾಡಿದ ನಂತರ ದಾವಾ ಆಸ್ತಿಯಲ್ಲಿ 2002ನೇ ಇಸವಿಯಲ್ಲಿ ಮನೆ ಕಟ್ಟಿದೆ . ಮನೆ ಕಟ್ಟುವಾಗ ಸದರಿ ಸ್ಥಳವನ್ನು ಭೂಪರಿವರ್ತನೆ ಮಾಡಿಸಿರುವುದಿಲ್ಲ. ಪಂಚಾಯಿತಿಯಿಂದ ಕಟ್ಟಡ ನಿರ್ಮಾಣದ ಪರವಾನಗಿಯನ್ನು ಪಡೆದಿದ್ದೇನೆ . ಈ ಪರವಾನಗಿಯ ಪ್ರತಿ ನನ್ನ ಬಳಿ ಇದೆ . ಇದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು . ದಾವಾ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಅಲ್ಲಿ ದಾವಾ ರಸ್ತೆ ಇತ್ತು ಎಂಬುದರ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ .

1993ನೇ ಇಸವಿಯಲ್ಲಿ 1ನೇ ಪ್ರತಿವಾದಿ ಸರ್ವೇ ನಂ. 104/1ಸಿ ರಲ್ಲಿ 1 ಎಕರೆ 58 ಸೆಂಟ್ಸ್ ಜಾಗವನ್ನು ಖರೀದಿ ಮಾಡಿದ್ದರು ಎಂದರೆ ಇರಬಹುದು . 1 ನೇ ಪ್ರತಿವಾದಿ ಖರೀದಿ ಮಾಡಿದ ಜಮೀನೂ ಸಹ ಖಾಲಿ ಜಮೀನು . ಸದರಿ 1 ಎಕರೆ 58 ಸೆಂಟ್ಸ್ ಜಮೀನು ನಾನು ಖರೀದಿ ಮಾಡಿದ ಜಮೀನಿಗೆ ತಾಗಿಕೊಂಡು ಇದೆ .

2006ನೇ ಇಸವಿಯಲ್ಲಿ 1ನೇ ಪ್ರತಿವಾದಿ ಸರ್ವೇ ನಂ. 104/1ಸಿ ರಲ್ಲಿ 11 ಸೆಂಟ್ಸ್ ಜಾಗವನ್ನು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ . 1.58 ಸೆಂಟ್ಸ್ ಜಾಗದದಿಲ್ಲಿ 2007 ನೇ ಇಸವಿಯಲ್ಲಿ 1ನೇ ಪ್ರತಿವಾದಿ ಮನೆ ಕಟ್ಟಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ . 1.58 ಸೆಂಟ್ಸ್ ಜಾಗದಲ್ಲಿ 1ನೇ ಪ್ರತಿವಾದಿಯ ಮನೆ ಇದೆ . ಆ ಮನೆಗೆ ಹೋಗುವುದಕ್ಕೆ 1ನೇ ಪ್ರತಿವಾದಿ ದಾವೆಯಲ್ಲಿ ನಾನು ಹೇಳಿದ ರಸ್ತೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸದರಿ ರಸ್ತೆಯು ಮೊದಲೆ ಇತ್ತು . ದಾವಾ ರಸ್ತೆ 1ನೇ ಪ್ರತಿವಾದಿಯ ಮನೆಯವರೆಗೂ ಹೋಗುತ್ತದೆ . ಅದು ಇನ್ನೊಂದು ಬದಿಯಿಂದ ಬಂದು ಮಾಸ್ತಿ ಕಟ್ಟೆಯ ಪೇಪರ್ ಮಿಲ್ ರಸ್ತೆಗೆ ಸೇರುತ್ತದೆ ಎಂದರೆ ಸರಿ . ಮಾಸ್ತಿ ಕಟ್ಟೆಯ ಪೇಪರ್ ಮಿಲ್ ರಸ್ತೆಯನ್ನು 2008ನೇ ಇಸವಿಯಲ್ಲಿ ಎ.ಪಿ.ಎಂ.ಸಿಯಿಂದ ನಿರ್ಮಾಣ ಮಾಡಿದ ರಸ್ತೆಯಾಗಿರುತ್ತದೆ .

ನಮ್ಮ ಆಸ್ತಿಯ ಯಾವ ದಿಕ್ಕಿನಲ್ಲಿಯೂ ಸಹ ಗದ್ದೆ ಇಲ್ಲ . ನಮ್ಮ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಯಾವುದೇ ಶೇಡಿಗುಡಿ ರಸ್ತೆ ಅಥವಾ ಅಣೆ ಕಟ್ಟು ಇಲ್ಲ . ಈ ದಾವೆಯನ್ನು ದಾಖಲು ಮಾಡುವ 2 ವರ್ಷಗಳ ಹಿಂದೆ 1ನೇ ಪ್ರತಿವಾದಿಯ ಮನೆಗೇ ಹೋಗುವ ರಸ್ತೆಯಿಂದ ನನ್ನ ಜಮೀನಿಗೆ ಹೋಗಲು ಹೊಸ ರಸ್ತೆ ಯನ್ನು ನಿರ್ಮಾಣ ಮಾಡಿದ್ದೇನೆ ಎಂದರೆ ಸರಿಯಲ್ಲ . ಹೊಸ ರಸ್ತೆಯನ್ನು ನಿರ್ಮಾಣ ಮಾಡಿ ಅಲ್ಲಿ ಗೇಟನ್ನೂ ಸಹ ಇಟ್ಟಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಗೇಟು ಇದೆ , ಸದರಿ ಗೇಟು ನಮ್ಮ ಕಾಂಪೌಂಡಿಗೆ ಇದೆ .

2ನೇ ಪ್ರತಿವಾದಿಗೂ ಮತ್ತು ನನ್ನ ನಡುವೆ ದಾವೆಯ ರಸ್ತೆಗೆ ಸಂಬಂಧಿಸಿದಂತೆ ಯಾವುದೇ ತಕರಾರು ಇಲ್ಲ . ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ , ಸದರಿ ಫೋಟೋದಲ್ಲಿ ಕಂಡು

ಬರುವ ಮನೆ 2ನೇ ಪ್ರತಿವಾದಿಯ ಮನೆಯಾಗಿರುತ್ತದೆ ಎಂದು ನೋಡಿ ಒಪ್ಪಿಗುರುತಿಸಿದ ಮೇರೆಗೆ, ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು . 2ನೇ ಪ್ರತಿವಾದಿ ನನಗೆ ಜಮೀನು ಮಾರಿದ ಕಲ್ಯಾಣಿಯವರ ಪತಿ . ನಾನು ಬಲಾತ್ಕಾರವಾಗಿ ರಸ್ತೆಯನ್ನು ನಿರ್ಮಾಣ ಮಾಡಿ ಗೇಟನ್ನು ಹಾಕಿದ್ದೇನೆ ಎಂದು 1ನೇ ಪ್ರತಿವಾದಿ ನನ್ನ ವಿರುದ್ಧ ಒಂದು ದೂರನ್ನು ದಾಖಲು ಮಾಡಿದ್ದು , ಸದರಿ ದೂರಿಗೆ ಸಂಬಂಧಿಸಿದಂತೆ , ಪೊಲೀಸರು ನನ್ನನ್ನು ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ . ನಿಪಿ-7 ರಲ್ಲಿ ಕಂಡು ಬರುವ ರಸ್ತೆಗಳು ಎಲ್ಲಿಗೆ ಹೊಗುತ್ತವೆ ಎಂದು ನನಗೆ ಗೊತ್ತಿಲ್ಲ . ನಿಪಿ-13 ರಿಂದ ನಿಪಿ-18 ಫೋಟೋಗಳಲ್ಲಿ ಕಂಡು ಬರುವ ನಾವು ಓಡಾಡುವ ರಸ್ತೆಯಲ್ಲಿ 1ನೇ ಪ್ರತಿವಾದಿ ಜೆ.ಸಿ.ಬಿಯನ್ನು ತಂದು ಅಗೆದ ಬಗ್ಗೆ ಕಾಣುತ್ತದೆ . ನಿಪಿ-13 ರಿಂದ ನಿಪಿ-18 ಫೋಟೋಗಳಲ್ಲಿ ಕಂಡು ಬರುವ ರಸ್ತೆ 1ನೇ ಪ್ರತಿವಾದಿಯ ಜಾಗದಲ್ಲಿ ಇರುವ ರಸ್ತೆಯಾಗಿರುತ್ತದೆ ಎಂದರೆ ಸರಿಯಲ್ಲ.

ಈ ದಾವೆಯನ್ನು ದಾಖಲು ಮಾಡುವ ಸಂದರ್ಭದಲ್ಲಿ ನನ್ನ ಬಳಿ ಜೀಪು ಇತ್ತು . ಇದು ನಾನು ಪ್ರಥಮವಾಗಿ ಖರೀದಿಸಿದ 4 ಚಕ್ರದ ವಾಹನ. ಸದರಿ ಜೀಪನ್ನು ನಾನು 2002 ನೇ ಇಸವಿಯಲ್ಲಿ ಖರೀದಿ ಮಾಡಿದ್ದೆ . ಈ ಜೀಪು ಈಗ ನನ್ನ ಬಳಿ ಇಲ್ಲ , ಮಾರಾಟ ಮಾಡಿದ್ದೇನೆ . ಜೀಪನ್ನು ಖರೀದಿ ಮಾಡಿದ ಬಗ್ಗೆ ದಾಖಲೆಗಳು ನನ್ನ ಬಳಿ ಇಲ್ಲ . 1ನೇ ಪ್ರತಿವಾದಿಯ ಪ್ರಕಾರ ಈ ದಾವೆಯನ್ನು ದಾಖಲು ಮಾಡಿದ ಸ್ವಲ್ಪ ಸಮಯದ ಪೂರ್ವದಲ್ಲಿ ಈ ಮೇಲೆ ಹೇಳಲಾದ ಜೀಪನ್ನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . 1ನೇ ಪ್ರತಿವಾದಿಯ ಮನೆಗೆ ಹೋಗುವ ರಸ್ತೆಯಿಂದ ನಮ್ಮ ಮನೆಗೆ ಹೋಗುವ ರಸ್ತೆಯನ್ನು ಈ ದಾವೆ ಮಾಡುವ 2 ವರ್ಷದ ಪೂರ್ವದಲ್ಲಿ ಬಲಾತ್ಕಾರವಾಗಿ ನಿರ್ಮಾಣ ಮಾಡಿದ್ದೇನೆ ಎಂದರೆ ಸರಿಯಲ್ಲ . ನಾನು ಗೇಟು ಇಡುವ ಪೂರ್ವದಲ್ಲಿ 1ನೇ ಪ್ರತಿವಾದಿಯ ಮನೆಯಿಂದ ನನ್ನ ಜಮೀನಿಗೆ ಸಂಪರ್ಕ ಕಲ್ಪಿಸುವ ರಸ್ತೆ

ಊರ್ಜಿತದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ನಮ್ಮ ಜಾಗದ ಪಶ್ಚಿಮ ದಿಕ್ಕಿನಲ್ಲಿ ಇರುವ ಗದ್ದೆಯ ಹುಣಿಗಳ ಮೂಲಕ ಶೇಡಿಗುಡಿ ರಸ್ತೆಯನ್ನು ಸಂಪರ್ಕಿಸುತ್ತಿದ್ದೆವು ಎಂದರೆ ಸರಿಯಲ್ಲ .

1ನೇ ಪ್ರತಿವಾದಿಯ ಜಮೀನು ಖಾಲಿ ಜಮೀನು ಆಗಿದ್ದ ಕಾರಣ , ನಾನು ಮನೆಯನ್ನು ಕಟ್ಟುವ ಸಂದರ್ಭದಲ್ಲಿ ಕಟ್ಟಡ ಸಾಮ್ಗಾಗ್ರಿಗಳನ್ನು 1ನೇ ಪ್ರತಿವಾದಿಯ ಜಮೀನಿನ ಮೂಲಕವೇ ತೆಗೆದುಕೊಂಡು ಹೋಗಿದ್ದೆ ಎಂದರೆ ಅದು 1ನೇ ಪ್ರತಿವಾದಿಯ ಜಮೀನು ಅಲ್ಲ , ಬದಲಾಗಿ ರಸ್ತೆಯಾಗಿರುತ್ತದೆ . 1ನೇ ಪ್ರತಿವಾದಿಯ ಜಮೀನಿನಲ್ಲಿ ರಸ್ತೆಯ ಹಕ್ಕನ್ನುಪ್ರತಿಪಾದಿಸುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ . ದಾವಾ ರಸ್ತೆಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ . 1ನೇ ಪ್ರತಿವಾದಿಯ ಜಮೀನಿನ ಯಾವುದೇ ಭಾಗಾಂಶವನ್ನು ರಸ್ತೆಯನ್ನಾಗಿ ಉಪಯೋಗಿಸಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ